# ಏಕೀಕೃತ ಮಾರುಕಟ್ಟೆ ವ್ಯಾಪ್ತಿಗೆ 66 ಎಫ್‌ಪಿಒ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಬಾರ್ಡ್ ಮತ್ತು ರಾಜ್ಯ ಸರ್ಕಾರದ ಬೆಂಬಲ ಹೊಂದಿರುವ 66 'ರೈತ ಉತ್ಪಾದಕ ಸಂಘಟನೆ'ಗಳು (ಎಫ್‌ಪಿಒ) ಗುರುವಾರ ನಡೆದ ಕಾರ್ಯಕ್ರಮದಲ್ಲಿ 'ಏಕೀಕೃತ ಮಾರುಕಟ್ಟೆ ವೇದಿಕೆ'ಗೆ (ಯುಎಂಪಿ) ಸೇರ್ಪಡೆಗೊಂಡವು.

ನಬಾರ್ಡ್‌ನ ಪ್ರಾದೇಶಿಕ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಸಂಘಟನೆಗಳು ರಾಷ್ಟ್ರೀಯ ಇ–ಮಾರುಕಟ್ಟೆ ಸೇವೆ ಯೋಜನೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಮನೋಜ್ ರಾಜನ್ ಅವರ ಸಮ್ಮುಖದಲ್ಲಿ ಯುಎಂಪಿ ಸೇರಿದವು ಎಂದು ನಬಾರ್ಡ್‌ನ ಪ್ರಕಟಣೆ ತಿಳಿಸಿದೆ. ನಬಾರ್ಡ್‌ನ ಕರ್ನಾಟಕ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕ ನೀರಜ್ ಕುಮಾರ್ ವರ್ಮಾ ಅವರೂ ಉಪಸ್ಥಿತರಿದ್ದರು.

ಈ 66 ಸಂಘಟನೆಗಳಿಗೆ ಇನ್ನು ಮುಂದೆ 162 ಮಾರುಕಟ್ಟೆಗಳ 44 ಸಾವಿರ ನೋಂದಾಯಿತ ವರ್ತಕರ ಜೊತೆ ವಹಿವಾಟು ನಡೆಸಲು ಸಾಧ್ಯವಾಗುತ್ತದೆ. 60ಕ್ಕೂ ಹೆಚ್ಚಿನ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಸಿಗುತ್ತದೆ. ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಸಿಗುತ್ತದೆ ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.